ನಾಲ್ಕು ದಿನಗಳಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಸೇಟ್ ಅಂಬಾಲಾಲನ ಮಿರ್ಜಾಪೂರ್ ಬಂಗಲೆಗೆ ಬಾಪೂವನ್ನು ಕರೆದೊಯ್ದರು. ಅಲ್ಲಿ ಅವರಿಗೆ ವಿಪರೀತ ಜ್ವರ ಬಂದಿತು. ಎಲೆಯಂತೆ ಅವರ ದೇಹ ನಡುಗುತ್ತಿತ್ತು. ಆದರೆ ಎಲ್ಲ ಔಷಧೋಪಚಾರಗಳನ್ನೂ ನಿರಾಕರಿಸಿದರು. ಕಾಯಿಲೆ ತೀವ್ರ ಸ್ಥಿತಿಯನ್ನು ತಲುಪಿದಾಗ ಅವರು ತನ್ನ ನೆನಪನ್ನು ಕಳೆದುಕೊಂಡು ಧ್ಯಾನಸ್ಥ ಸ್ಥಿತಿಯಲ್ಲಿದ್ದರು. ನಿದ್ದೆ ಮಾಡುತ್ತಿರಲಿಲ್ಲ. ಪರಿಸ್ಥಿತಿಯ ಬಗ್ಗೆ ಸರಿಯಾದ ಪ್ರಜ್ಞೆ ದೇಹದಲ್ಲಿತ್ತು. ಆದರೆ ಮನಸ್ಸು ಎಲ್ಲೋ ಇತ್ತು.

ಎರಡು ದಿನಗಳ ಹಿಂದೆ ಬಾ ಬಳಿ ತನ್ನನ್ನು ಸಬರಮತಿಗೆ ಕರೆದುಕೊಂಡು ಹೋಗಬೇಕೆಂದು ಹೇಳಿದರು. ಕಣುಕಾರ ಸಲಹೆಯನ್ನು ಕೇಳಿದಾಗ ಅವರು ನಿರಾಸಕ್ತಿಯಿಂದ, ''ಎಲ್ಲಿದ್ದರೇನಂತೆ?'' ಎಂದರು. ಬಾ ಬಾಪುವಿನ ಪಾದಗಳನ್ನು ನೇವರಿಸುತ್ತಾ ಹತ್ತಿರದಲ್ಲಿದ್ದರು. ಬಾಪೂ ಮುಗುಳ್ನಗುವಿನೊಂದಿಗೆ, ''ಬಹುಶಃ ಅದು ನಡೆದರೆ ಸಬರಮತಿಯೇ ಒಳ್ಳೆಯ ಸ್ಥಳ...'' ಎಂದರು. ಬಾ ಅವರ ಕಣ್ಣುಗಳಿಂದ ಒಂದು ತೊಟ್ಟು ಕಣ್ಣೀರು ಕೆನ್ನೆಗಳ ಮೇಲೆ ಉದುರಲು ಮುಖದ ಮೇಲಿನ ಸೆರಗನ್ನು ಎಳೆದುಕೊಂಡರು.

ಸಬರಮತಿಗೆ ಬಂದಮೇಲೆ ಬಾಪೂ ಹೆಚ್ಚಾಗಿ ಮಾತನಾಡಲಿಲ್ಲ. ಅಹಮದಾಬಾದಿನ ಡಾಕ್ಟರ್ ತಲ್ವಲ್ಕರ್ ಬಾಪುವನ್ನು ನೋಡಿಕೊಂಡರು. ಆಶ್ರಮದ ಹೊರಗೆ ಮರದ ಕೆಳಗೆ ನಿಂತಾಗ, ''ಇದು ಒಂದು ರೀತಿಯಲಿ ಪುರೋಹಿತ ಕೆಲಸವೇ...'' ಎಂದು ಕಹಿಯಾಗಿ ತಲ್ವಲ್ಕರ್ ಹೇಳಿದರು. ''ಅವರು ನಿರ್ಧರಿಸಿಬಿಟ್ಟಿದ್ದಾರೆ.''

ಆಶ್ರಮದಲ್ಲಿನ ಎಲ್ಲರಿಗೂ ಅದು ತಿಳಿದಿತ್ತು. ಪ್ರತಿದಿನವೂ ಬಂದು ಕಿಟಕಿಯ ಮೂಲಕ ಬಾಪುವನ್ನು ನೋಡಿ ನಿಟ್ಟಿಸಿರುಬಿಟ್ಟು ಹೋಗುತ್ತಿದ್ದರು. ಮೆಲ್ಲಗೆ ದೀಪವು ಆರುತ್ತಿರುವುದನ್ನು ಪ್ರತಿದಿನವೂ ಕಾಣುತ್ತಿದ್ದರು. ಆದರೂ ತಲ್ವಲ್ಕರ್ ಹಾಗೆ ಹೇಳಿದ್ದು ಪೂಲ್ಚಂದ್ರರನ್ನು ಗಾಬರಿಗೊಳಿಸಿತು.

''ಏನು ಹೇಳುತ್ತಿದ್ದೀರಿ?'' ಎಂದರು ಪೂಲ್ಚಂದ್ರ.

ತಲ್ವಲ್ಕರ್, ''ಸದಾ ಇಷ್ಟು ಆವೇಶದಿಂದ ಕೆಲಸ ಮಾಡುವ ಮತ್ತೊಬ್ಬ ಮನುಷ್ಯನನ್ನು ನಾನು ನೋಡಿಲ್ಲ. ಇನ್ನು ಸ್ವಲ್ಪ ಕಠಿಣವಾಗಿ ದುಡಿದರೆ ಜಗತ್ತನ್ನು ಇವರು ಬದಲಾಯಿಸಿಬಿಡಬಹುದು ಎಂದು ನಾನು ಅಂದುಕೊಳ್ಳುವುದುಂಟು. ಆದರೆ ಅವರೊಳಗೆ ಸದಾ ಒಂದು ಬೇಸರ ಇದೆ. ಒಳಗೆ, ಬಹಳ ಆಳದಲ್ಲಿ. ನಿಜಕ್ಕೂ ಅವರಿಗೆ ಮನುಷ್ಯರ ಆಳ ಏನೆಂಬುದು ಚೆನ್ನಾಗಿಯೇ ಗೊತ್ತಿದೆ. ಜಗದ ರೀತಿಗಳನ್ನು ಅರಿತ ಜ್ಞಾನಿಗಳಿಗೆಲ್ಲರಿಗೂ ಆ ಬೇಸರ ಇದ್ದೇ ಇರುತ್ತದೆ. ಅವರು ಬಲಿತ ಹಣ್ಣಿನಂತೆ ಹೊರಡಲು ಸದಾ ತಯಾರಾಗಿಯೇ ಇರುತ್ತಾರೆ...'' ಎಂದರು.

ಬಾ ಕಣ್ಣು ತೆರೆದು ಪೂಲ್ಚಂದ್ರರನ್ನು ನೋಡಿದರು. ಏನು ಎಂಬಂತೆ. ಪೂಲ್ಚಂದ್ರರು ಮಲದ ಮಡಕೆಯನ್ನು ಇಟ್ಟು ಮೆಲ್ಲಗೆ ಹೊರಹೋದರು.

ಹೊರಗೆ ಆ ಸನ್ಯಾಸಿ ಅಲ್ಲೇ ಹಾಗೆಯೇ ನಿಂತಿದ್ದರು. ಪೂಲ್ಚಂದ್ರ, ''ನಮಸ್ಕಾರ ಮಹಾರಾಜ್... ಇಂದು ರಾತ್ರಿ ನೀವು ಬಾಪುವನ್ನು ನೋಡಲು ಆಗುವುದಿಲ್ಲ. ಡಾಕ್ಟರ್ ತಲ್ವಲ್ಕರ್ ಈಗ...''

''ನಾನು ಡಾಕ್ಟರ್ ತಲ್ವಲ್ಕರ್ ಅವರ ಕಡೆಯಿಂದಲೇ ಬಂದವನು.''

''ಅವರು...''

''ನನ್ನ ಔಷಧ ಪದ್ಧತಿಗಳ ಬಗ್ಗೆ ನಾನು ಅವರ ಬಳಿ ವಿಸ್ತಾರವಾಗಿ ಮಾತನಾಡಿದ್ದೇನೆ...''

''ತಲ್ವಲ್ಕರ್ ಏನು ಹೇಳಿದರು?''

''ನಾನೊಬ್ಬ ಹುಚ್ಚ ಎಂದುಕೊಂಡಿದ್ದಾರೆ. ಆದ್ದರಿಂದಲೇ ನನ್ನನ್ನು ನೋಡಲು ಮತ್ತು ನನ್ನ ಚಿಕಿತ್ಸೆಗೆ ಒಳಗಾಗಲು ಗಾಂಧಿ ಒಪ್ಪಿಕೊಳ್ಳಬಹುದು ಎಂದರು.''